

ಮಹಾತ್ಮನ ಪ್ರಯೋಗಶಾಲೆ
ಸಾಬರಮತಿ ಆಶ್ರಮ

ಅಹಮದಾಬಾದಿನಲ್ಲಿದ್ದಷ್ಟು ದಿನದ ಅವರ ಜೀವನ ಚರಿತ್ರೆಯ ಚಿತ್ರಪ್ರದರ್ಶನ. ಮೂಲೆಯಲ್ಲಿ ಕುಳಿತು ನೂಲು ತೆಗೆಯುವುದರ ಪ್ರಾತ್ಯಕ್ಷಿಕೆ ನೀಡುತ್ತಿರುವ ಒಬ್ಬರು ಸ್ವಯಂಸೇವಕರು. ಅವರ ಕೈಯಲ್ಲಿರುವ ಹತ್ತಿಯ ಉಂಡೆ ಸುರಳೀತವಾಗಿ ಚರಖಾದ ಸಿಂಬಿಗಳಿಗೆ ಸುತ್ತಿಕೊಂಡು ನೂಲಾಗಿ ಮಾರ್ಪಡುತ್ತದೆ. ಕೆಲವೊಮ್ಮೆ ನೂಲಿನ ಸೂತ್ರ ಹರಿಯುತ್ತದೆ. ಮತ್ತೆ ಸೂತ್ರದ ಅಂಚಿಗೆ ಹತ್ತಿಯ ಉಂಡೆಯನ್ನು ಸೋಕಿಸಿ ಚರಖಾ ತಿರುಗಿಸಿದರೆ ಸಾಕು ಹರಿದ ನೂಲಿನ ಸುಳಿವೇ ಇಲ್ಲದಂತೆ ಏಕಸೂತ್ರವಾಗಿ ನೂಲು ಪುನಃ ಮುಂದುವರಿಯುತ್ತದೆ.

ಬಂದ ಅತಿಥಿಗಳಲ್ಲಿ ಯಾರೋ ಒಬ್ಬರು ನಿಧಾನವಾಗಿ, ಗಾಂಧಿಯ ವಿಚಾರಗಳು ಇವತ್ತಿಗೆ ಎಷ್ಟು ಪ್ರಸ್ತುತ ಎನ್ನುವ ಘನವಾದ ಪ್ರಶ್ನೆ ಎತ್ತುತ್ತಾರೆ. ಅವರಲ್ಲೇ ತಿಳಿದವರೊಬ್ಬರು ಅದಕ್ಕೆ ಚಿಂತಿಸಿ, ಮಂಥಿಸಿ, ‘ತುಂಬಾ ಸಿಂಪಲ್ ಮನುಷ್ಯ. ಅದು ಬಿಟ್ರೆ ಇವತ್ತಿನ ಜೀವನಕ್ಕೆ ಈ ವಿಚಾರವೆಲ್ಲಾ ಅಪ್ರಸ್ತುತವೇ’ ಎಂದು ತಮ್ಮ ನಿರ್ಣಯ ಕೊಡುತ್ತಾರೆ. ಹಾಗೇ ಮಾತು ಬೆಳೆದು, ‘ಎಲ್ಲಾ ಸರಿ, ಆದರೆ ಇಂಡಿಯಾ ಪಾರ್ಟಿಷನ್ ಆಗಕ್ಕೆ ಗಾಂಧೀನೆ ಕಾರಣ; ಅದೂ, ಆಮೇಲೆ, ಮುಸಲ್ಮಾನರನ್ನು ಓಲೈಸೋದು, ಅದೊಂದು ಬಿಟ್ಟರೆ ಒಳ್ಳೇ ಮನುಷ್ಯನೇ. ಆದರೆ, ಫ್ಯಾಮಿಲಿ ಲೈಫಲ್ಲಿ ಮಾತ್ರ ಸಿಕ್ಕಾಪಟ್ಟೆ ಫೇಲ್ಯೂರ್’ ಎಂದು ಹೇಳುತ್ತಾರೆ. ಆದರೆ, ಆ ಜಾಗದ ಕ್ಷೇತ್ರಮಹಿಮೆಯೋ ಅಥವಾ ಅಹಮದಾಬಾದಿನ ನಿತ್ಯಬೇಸಿಗೆಯ ರಣಬಿಸಿಲೋ, ಅಂತೂ ಯಾರೂ ಇದನ್ನು ಒಂದು ದೊಡ್ಡ ಚರ್ಚೆಯಾಗಿ ಬೆಳೆಸುವುದಿಲ್ಲ. ಹೋಗಲಿ, ಬಂದಿದ್ದಕ್ಕೆ ನಮಸ್ಕರಿಸೋಣವೆಂದರೆ ಅಂತಹ ಗರ್ಭಗುಡಿಯ ಮೂರ್ತಿಯೋ, ಚಿತ್ರಪಟವೋ ಅಲ್ಲಿಲ್ಲ. ಇರುವುದೆಲ್ಲಾ ಐತಿಹಾಸಿಕ ಸಂದರ್ಭದಲ್ಲಿ ತೆಗೆದ ಗಾಂಧೀಜಿಯ ಚಿತ್ರಪಟಗಳು. ಅದಕ್ಕೆ ಅಡ್ಡಬೀಳಲೂ ಆಗುವುದಿಲ್ಲ. ದೇವಸ್ಥಾನಕ್ಕೆ ಹೋದರೆ ನೋಡಲು, ಮಾಡಲು ಏನಾದರೂ ಒಂದಷ್ಟು ಇರುತ್ತದೆ. ಏನಿಲ್ಲವೆಂದರೂ ತಿಂಡಿತೀರ್ಥಗಳ ಮುಂಗಟ್ಟೆರುತ್ತದೆ. ಆದರೆ ಗಾಂಧೀ ಆಶ್ರಮದಲ್ಲಿ ಇಂಥದ್ದೇನೂ ಇಲ್ಲ. ಹಾಗಾಗಿ ಗಾಂಧೀ ಚಿತ್ರವಿರುವ ಕೀಚೈನು, ಖಾದಿ ಕರವಸ್ತ್ರ, ಗುಡಿಕೈಗಾರಿಕೆಯ ಸಾಬೂನು, ಇಂತಹ ವಸ್ತುಗಳನ್ನು ಖರೀದಿಸಿ, ಈ ಗಾಂಧೀಪಾಶದಿಂದ ಹೇಗೋ ಬಿಡಿಸಿಕೊಂಡು ಆಶ್ರಮದ ಹೊರಕ್ಕೆ ಬಂದರೆ, ಬಚಾವಾದವರ ಹಾಗೆ ನಿಟ್ಟುಸಿರು ಬಿಟ್ಟ ಅನುಭವ. ನಮಗೂ ನಮ್ಮ ಅತಿಥಿಗಳ ವಿಮರ್ಶಾತ್ಮಕ ನೋಟಗಳಿಂದ ತಪ್ಪಿಸಿಕೊಂಡ ನಿರಾಳ.

ಇಂತಹ ಸಂದಿಗ್ಧತೆಯ ಬಗ್ಗೆ ನಾನು ಯಾಕೆ ಹೀಗಾಗುತ್ತದೆ ಎಂದು ಚಿಂತಿಸಹೋಗಿ ಸೋತಿದ್ದೇನೆ. ಬಹುಶಃ ಗಾಂಧಿಗೆ ಹೇಳಲಿಕ್ಕೆ ಏನೂ ಇಲ್ಲವೇನೋ. ಅಪರಿಗ್ರಹ, ಆಸ್ತೇಯ, ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಇಂತಹ ಆದರ್ಶಗಳನ್ನೆಲ್ಲಾ ಯಾರೂ ಉಪದೇಶದ ರೀತಿ ಕೊಡುವುದಕ್ಕಂತೂ ಆಗುವುದಿಲ್ಲ. ಅವು ವ್ರತಗಳು. ‘ಆಶ್ರಮವಾಸಿಗಳಾಗುತ್ತೇವೆ’ ಎಂದು ಬಂದವರಿಗೆ ಈ ನಿಯಮಗಳನ್ನು ಹೇಳಬಹುದಷ್ಟೆ. ಅಷ್ಟಕ್ಕೂ ಅವೇನೂ ಗಾಂಧೀಜಿಗೆ ವಿಶೇಷವಾದ ವ್ರತಗಳೇನೂ ಅಲ್ಲ. ಭಾರತದ ಸಂಪ್ರದಾಯಗಳೆಲ್ಲಾ ಹೇಳುತ್ತಾ ಬಂದಿರುವಂಥವು. ಚಾರಿತ್ರಿಕ ದೃಷ್ಟಿಯಿಂದ ನೋಡಿದರೂ, ಯಾರೂ ಭಾರತದ ಇತಿಹಾಸದ ಕುರಿತ ಹೆಚ್ಚಿನ ಜ್ಞಾನಕ್ಕಾಗಿ ಸಾಬರಮತಿ ಆಶ್ರಮಕ್ಕೆ ಹೋಗುವುದಿಲ್ಲವಷ್ಟೆ. ಅಥವಾ ನಮ್ಮ ಸಂಸ್ಕೃತಿಯ, ದೇಶದ ಕುರಿತು ಹೆಮ್ಮೆಪಡುವ ಕಾರಣಕ್ಕೂ ಹೋಗುವುದಿಲ್ಲ. ಅದಕ್ಕೆ ಬೇರೆ ನಾಯಕರ ಬೇರೆ ಕ್ಷೇತ್ರಗಳಿವೆ. ಸಾಬರಮತಿ ಆಶ್ರಮಕ್ಕೆ